# ಭಾರತದಲ್ಲಿ ಬಾಲ್ಯದ ಸಂಕುಚಿತ ಪರಿಕಲ್ಪನೆ

**ಹವ್ವೋವಿ ವಾಡಿಯಾ**
**Havovi Wadia**

ಮಕ್ಕಳ ಹಕ್ಕುಗಳ ಕ್ರಿಯಾಶೀಲ ಕಾರ್ಯಕರ್ತರು, ಭಾರತದ ಮಕ್ಕಳನ್ನು'ಅಭಿವೃದ್ಧಿ', 'ಉಳಿವು', 'ರಕ್ಷಣೆ' ಮತ್ತು 'ಭಾಗವಹಿಸುವಿಕೆ' ಎಂದು ಸೀಮಿತಗೊಳಿಸಿದ ಚೌಕಟ್ಟಿಗಳಾಚೆ ಹೆಜ್ಜೆಯಿಡುವ ಅಗತ್ಯವಿದೆಯೇ? ಒಂದು ರೀತಿಯ ಮಿತಿಗೊಳಿಸುವ ಬಾಲ್ಯದ ಕಲ್ಪನೆಗಳ ಸುತ್ತ ನಿರ್ಮಿತವಾಗಿರುವ ಮಕ್ಕಳ ಹಕ್ಕುಗಳ ಕಾರ್ಯಕ್ರಮಗಳನ್ನು ಪ್ರಶ್ನಿಸುವ ಅಗತ್ಯವಿದೆಯೇ?

ಅನೇಕ ಆಖ್ಯಾನಗಳ ಪ್ರಕಾರ ಭಾರತದಲ್ಲಿ ಬಾಲ್ಯವು 'ಬಾಲ್ಯದ ಸತ್ವ' ಮತ್ತು ಮಕ್ಕಳ ಸ್ವಭಾವದ ಬಗೆಗಿನ 'ಸಾರ್ವತ್ರಿಕ' ನಂಬಿಕೆಗಳಿಂದ ಮರೆಮಾಡಲಾದ ವಿವಿಧ ಅನುಭವಗಳ ಪರಸ್ಪರ ಸಂಬಂಧವಿಲ್ಲದ ಒಂದು ಸಂಘಟಿತ ವಿಷಯವಾಗಿದೆ. ಈ ಹಲವು 'ಸಾರ್ವತ್ರಿಕಗಳು' ಈ ದೇಶದ ವಸಾಹತುಶಾಹಿ ಕಾಲದ ಪ್ರತಿಧ್ವನಿಗಳಾಗಿವೆ ಮತ್ತು ಮಧ್ಯಮ ವರ್ಗವು ನಮ್ಮ ಶಿಕ್ಷಣದ ವ್ಯವಸ್ಥೆಯ ಮೂಲಕ ಪಡೆದ ರೂಸೋ (Rousseau)ರವರ ಬಾಲ್ಯದ ಮುಗ್ಧತೆಯ ಕಲ್ಪನೆಗಳನ್ನು ನಂಬುತ್ತಾ ಬೆಳೆದಿದೆ ಎಂಬ ವಾಸ್ತವತೆಯಿಂದ ಹೊರಹೊಮ್ಮಿದೆ. ಕಳೆದ ಕೆಲವು ವರ್ಷಗಳಲ್ಲಿ ನಗರದ ಮೇಲ್ವರ್ಗದ ಪದರವು ಹೆಚ್ಚೆಚ್ಚು 'ಜಾಗತೀಕೃತ' ಜೀವನಶೈಲಿಯ ಕಡೆಗೆ ಚಲಿಸುತ್ತಿರುವುದರಿಂದ ಈ ಹಲವು ಕಲ್ಪನೆಗಳು ಬಲವರ್ಧಿತಗೊಂಡಿವೆ.

ಮಕ್ಕಳೊಂದಿಗೆ ವ್ಯಾಪಕವಾಗಿ ತೊಡಗಿಸಿಕೊಂಡ ವ್ಯವಸ್ಥೆ ಮತ್ತು ಸಂಸ್ಥೆಗಳು ಸಹ ಮಕ್ಕಳು ಮತ್ತು ಬಾಲ್ಯದ ಬಗ್ಗೆ ಹೆಚ್ಚು ಕಡಿಮೆ ಒಂದು ಏಕೀಕೃತ ದೃಷ್ಟಿಕೋನ ಹೊಂದಿರುವುದನ್ನು ಪ್ರದರ್ಶಿಸುತ್ತವೆ. ಉದಾಹರಣೆಗೆ, ಸರ್ಕಾರೇತರ ಸಂಸ್ಥೆಗಳ (NGOs) ಕಾರ್ಯ ಯೋಜನೆಗಳು, ಮಕ್ಕಳು ಮತ್ತು ಅವರ ಪ್ರಪಂಚವನ್ನು 1992ರಲ್ಲಿ ಅಂಗೀಕರಿಸಿದ ಮತ್ತು ದೇಶದ ಪೌರವರಾದ ಮಕ್ಕಳ ಕಡೆಗೆ ರಾಜ್ಯದ ಕರ್ತವ್ಯಗಳನ್ನು ಬಲಪಡಿಸಿದ UNCRC (United Nations Convention on the Rights of the Child (ಯುಎನ್‌ಸಿಆರ್‌ಸಿ-ಮಕ್ಕಳ ಹಕ್ಕುಗಳ ಕುರಿತ ವಿಶ್ವಸಂಸ್ಥೆಯ ಸಮಾವೇಶದ ಒಪ್ಪಂದಗಳು)) ದಾಖಲೆಯ ಚೌಕಟ್ಟಿನಲ್ಲೇ ನೋಡಲಾಗುತ್ತಿದೆ. ಅಂತರರಾಷ್ಟ್ರೀಯವಾಗಿ ಈ ದಾಖಲೆಯು ಪ್ರಶಂಸೆಗೆ ಒಳಗಾಗಿದ್ದರೂ, ಬಾಲ್ಯದ ಬಗ್ಗೆ ಒಂದು ಪ್ರಮಾಣಿತ ಕಲ್ಪನೆಯನ್ನು ಸೃಷ್ಟಿಸಿರುವುದಲ್ಲದೆ ಎಲ್ಲಾ ಕಾರ್ಯ ಯೋಜನೆಗಳಿಗೆ ಆಧಾರವಾಗಿರುವ ಮಾದರಿಯೆಂದು ಪರಿಗಣಿಸಲಾಗಿರುವ ಕಾರಣ, ಇದು ಅನೇಕ ವೇಳೆ ಟೀಕೆಗೆ ಗುರಿಯಾಗಿದೆ[1].

ಬಾಲ್ಯದ ವಿಧಾನಗಳ ಸಾಂಸ್ಥಿಕೀಕರಣದಲ್ಲಿ ಶಿಕ್ಷಣ ವ್ಯವಸ್ಥೆಯು ಒಂದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಪಠ್ಯಪುಸ್ತಕಗಳ ಸ್ಥೂಲ ವೀಕ್ಷಣೆಯಿಂದ ತಿಳಿಯುವುದೇನಂದರೆ, ಅವುಗಳನ್ನೂ ಸಹ ಹೆಚ್ಚು ಕಡಿಮೆ - ಹುಡುಗ, ಮೇಲ್ಜಾತಿ, ಮಧ್ಯಮ ವರ್ಗ, ನಗರದ - ಪ್ರಮಾಣಿತ-ಮಗುವಿಗಾಗಿ ಬರೆಯಲಾಗಿದೆ. ಹೆಚ್ಚಿನದರಲ್ಲಿ ಲಿಂಗ ಪಕ್ಷಪಾತವು ಮುಂದುವರಿಯುತ್ತಿದೆ, ಕಥೆಗಳು/ಆಖ್ಯಾನಗಳು/ಚಿತ್ರಗಳಲ್ಲಿ ಬಾಲಕಿಯರನ್ನು ಹೊರಗಿಡುತ್ತವೆ ಇಲ್ಲವೇ ಹೆಣ್ಣು ಮಕ್ಕಳ ಬಗ್ಗೆ ಇರುವ ಸಾಮಾನ್ಯೀಕರಿಸಲಾದ ಪೂರ್ವಭಾವಿಗಳನ್ನು (stereotypes) ಬಲಪಡಿಸುತ್ತವೆ. ಇದಷ್ಟೇ ಅಲ್ಲದೆ, ಬುಡಕಟ್ಟು ಜನಾಂಗದ ಮಕ್ಕಳು, ದಲಿತ ಮಕ್ಕಳು, ಗ್ರಾಮೀಣ ಭಾರತದ ಮಕ್ಕಳು ಈ ಪುಸ್ತಕಗಳಲ್ಲಿ ಬರುವ ಮಕ್ಕಳ ಜೊತೆ ತಮ್ಮನ್ನು ಗುರುತಿಸಿಕೊಳ್ಳಲು ಕಷ್ಟವಾಗಬಹುದು ಏಕೆಂದರೆ ಪುಸ್ತಕಗಳಲ್ಲಿ ಬರುವ ಮಕ್ಕಳು ಅನಿವಾರ್ಯವಾಗಿ ಬಾಲ್ಯದ ಒಂದು ಪ್ರಬಲ ಕಲ್ಪನೆಯ ಮೇಲೆ ರೂಪಿತಗೊಂಡಿರುತ್ತಾರೆ.

ಚಲನಚಿತ್ರಗಳಲ್ಲಿ ಮಕ್ಕಳು ಮುದ್ದಾದ ಆತ್ಮಸಾಕ್ಷಿಯ ಧ್ವನಿಗಳಾಗಿ ಉಳಿದು, ಅವರನ್ನು ನಾಯಕ ಮತ್ತು ನಾಯಕಿಯನ್ನು ಒಂದುಗೂಡಿಸುವ ಸಾಧನಗಳನ್ನಾಗಿ ಬಳಸುವುದನ್ನು ಬಿಟ್ಟರೆ, ಅವರನ್ನು ವ್ಯಕ್ತಿಗಳನ್ನಾಗಿ ಪರಿಗಣಿಸಿ ಬರೆದ ಪಾತ್ರಗಳು ಬಹಳ ಕಡಿಮೆ. ಅಪೌಷ್ಟಿಕತೆಯಿಂದ ಸಾಯುವ ಮಕ್ಕಳು, ವಾಹನಗಳ ಕೆಳಗೆ ಸಿಕ್ಕಿಬಿದ್ದ ಮಕ್ಕಳು, ತಂದೆ ತಾಯಿಯಿಂದ ನಿರ್ಲಕ್ಷಿತರಾದ ಮಕ್ಕಳು, ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳು – ಈ ರೀತಿಗಳಲ್ಲಿ ಉಲ್ಲಂಘಿಸಲಾದ ಮಕ್ಕಳ ಕಥೆಗಳ ಮೇಲೆ ವೃತ್ತಿಪತ್ರಗಳ ವರದಿಗಳು ಕೇಂದ್ರಿತವಾಗಿರುತ್ತವೆ. ಪ್ರಸ್ತುತ, ಎಲ್ಲರ ಗಮನವು ಶಿಕ್ಷಣದ ಹಕ್ಕು ಕಾಯಿದೆ 2010 ರ ಮೇಲೆ ಕೇಂದ್ರೀಕೃತವಾಗಿರುವುದರಿಂದ ಬಾಲ್ಯ ಮತ್ತು ಮಕ್ಕಳ ಹಕ್ಕುಗಳು ಶಾಲಾ ಶಿಕ್ಷಣದ ವ್ಯವಸ್ಥೆಯ ಮೇಲೆ ಕೇಂದ್ರೀಕೃತವಾಗಿ ಆ ವ್ಯವಸ್ಥೆಯಿಂದಲೇ ನಿರ್ಧರಿತವಾಗುವಂತೆ ತೋರುತ್ತದೆ.

ಹಾಗಾದರೆ ಭಾರತದಲ್ಲಿ ಬಾಲ್ಯಾವಸ್ಥೆ ಎಂದರೇನು? ಮತ್ತು ಅದನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬೇಕು?

ಪ್ರಾಯಶ:, ಇದಕ್ಕೆ ಬದಲಾಗಿ ಮೊದಲಿಂದಲೇ ಪ್ರಾರಂಭಿಸಿ, ನಾವು ಈ ಪ್ರಶ್ನೆಗಳನ್ನು ಏಕೆ ಕೇಳುತ್ತಿದ್ದೇವೆ ಎಂದು ಕೇಳುವುದು ಉತ್ತಮ.

ಕಳೆದ ಎರಡು ದಶಕಗಳಲ್ಲಿ, ಕೆಲವು ವಸ್ತುಗಳನ್ನು ನಿರ್ದಿಷ್ಟವಾಗಿ ಮಕ್ಕಳಿಗೆಂದೇ ಲಭ್ಯವಾಗುವಂತೆ ಮಾಡಿದ್ದರಿಂದ, ಗ್ರಾಹಕ ಮಾರುಕಟ್ಟೆಗೆ ಮಕ್ಕಳ ಕೊಡುಗೆಯು ಗಮನಾರ್ಹವಾದದ್ದು. ಈ ವಸ್ತುಗಳ ಮಾರಾಟದ ಯಶಸ್ಸಿಗಾಗಿ ಕಳೆದ 20 ವರ್ಷಗಳಲ್ಲಿ ಜಾಹೀರಾತುಗಳಲ್ಲಿ ಬಹಳಷ್ಟು ಹಣ ಹೂಡಿಕೆಯಾಗಿದ್ದು ಇಲ್ಲಿ ಮಕ್ಕಳ ಗೋಚರತೆಯು ಅನೇಕ ಪಟ್ಟು ಹೆಚ್ಚಾಗಿದೆ. ಅವರು (ನಿರ್ದಿಷ್ಟ ವಸ್ತುಗಳನ್ನು ಕೊಳ್ಳಲು ಮಕ್ಕಳು ಮತ್ತು ವಯಸ್ಕರನ್ನೂ ಒಳಗೊಂಡಂತೆ ಜನಗಳ ಮನವೊಲಿಸಲು ಜಾಹೀರಾತುಗಳಲ್ಲಿ) ಮಾರಾಟಗಾರ

ಮತ್ತು ಗ್ರಾಹಕ - ಎರಡೂ ಪಾತ್ರಗಳಲ್ಲಿಯೂ ಗೋಚರವಾಗುತ್ತಾರೆ. ಕಳೆದ 20 ವರ್ಷಗಳಲ್ಲಿ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕರ ಮನಸ್ಸನ್ನು ದೃಕ್-ಶ್ರವಣ(audiovisual) ಮಾಧ್ಯಮಗಳು ವಶಪಡಿಸಿಕೊಂಡಿದೆಯೆಂದರೆ ತೋರಿಕೆಗಾದರೂ ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳ ಇರುವಿಕೆಯು ಉದಾರೀಕರಣ ಪೂರ್ವ ವರ್ಷಗಳಿಗಿಂತಲೂ ಹೆಚ್ಚಾಗಿದೆ ಎಂದು ಭಾವಿಸಬಹುದು.

ಜಾಹೀರಾತಿನಲ್ಲಿ ಮಕ್ಕಳ ಇರುವಲ್ಲದೆ ದೂರದರ್ಶನದ ಧಾರಾವಾಹಿ, ರಿಯಾಲಿಟಿ ಶೋಸ್, ಸಿನಿಮಾ, ಗೇಮ್ ಶೊಸ್ ಇತ್ಯಾದಿಗಳಲ್ಲಿ ಮಕ್ಕಳ ಗೋಚರತೆ ಹೆಚ್ಚುತ್ತಿದೆ. ತೀವ್ರ ಸ್ಪರ್ಧೆ, ಅತಿ ನಾಟಕೀಯತೆ, ಉಜ್ವಲ ದೀಪಗಳು ಮತ್ತು ವೇಷಭೂಷಣಗಳು, ಮತ್ತು ಅನೇಕ ಸಂದರ್ಭಗಳಲ್ಲಿ ಮಕ್ಕಳನ್ನು ಸಣ್ಣ ಆಕಾರದ ವಯಸ್ಕರಂತೆ ಸೋಗು ಹಾಕುವುದು – ಇಂತಹ ಹಲವು ವಿಷಯಗಳಿಗೆ ಸಂಬಂಧಿಸಿದ ಮತ್ತು ಭಾರತದ ಜಾಗತೀಕೃತ ಪ್ರತಿರೂಪದ ಭಾಗವಾಗಿರುವ ಇದು ಒಂದು ರೀತಿಯ ವಿಶಿಷ್ಟ ಗೋಚರತೆ. ಇವೆಲ್ಲವೂ ಮಕ್ಕಳು ಹೇಗೆ ವೇಗವಾಗಿ ಬೆಳೆಯುತ್ತಿದ್ದಾರೆ, ಮತ್ತು ಯಾವ ವಯಸ್ಸಿನ ಮಕ್ಕಳನ್ನು, ಯಾವ ರೀತಿಯ ಮತ್ತು ಎಷ್ಟರ ಮಟ್ಟಿಗೆ ಮಾಧ್ಯಮಗಳಿಗೆ ಒಡ್ಡುವುದು ಅಪೇಕ್ಷಣೀಯ ಎನ್ನುವುದರ ಚರ್ಚೆಯ ಕಿಡಿ ಹೊತ್ತಿಸಿದೆ.ಈ ಚರ್ಚೆಯು ಕಾಳಜಿ ಮತ್ತು ರಕ್ಷಣೆಯ ವ್ಯಾಖ್ಯಾನದೊಳಗೆ ನೆಲೆಗೊಂಡಿದ್ದು ಮಕ್ಕಳಿಗೆ ಸಂಬಂಧಿಸಿದ ವಿಷಯಗಳು ಬಂದAತಹ ಸಂದರ್ಭಗಳಲ್ಲಿ ಹೆಚ್ಚು ಬಳಸಲಾಗುತ್ತದೆ.

ಇದೇ ಸಮಯದಲ್ಲಿ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಚಿತ್ರಿಸಿರುವ ಮಕ್ಕಳ ಜೀವನಕ್ಕೆ ಸಂಪೂರ್ಣ ವಿರುದ್ಧವಾಗಿ, ಆಹಾರ, ವೈದ್ಯಕೀಯ ಚಿಕಿತ್ಸೆ, ಆಶ್ರಯ, ನೀರು, ಗುಣಮಟ್ಟದ ಶಿಕ್ಷಣಕ್ಕೆ ಅವಕಾಶ ಇತ್ಯಾದಿಗಳ ಕೊರತೆ ಇರುವ ಅಧಿಕ ಸಂಖ್ಯೆಯ ಮಕ್ಕಳ ಮೇಲೆ ಹೆಚ್ಚಿನ ಬೆಳಕು ಬೀರಲಾಗುತ್ತಿದೆ. ಪ್ರಸ್ತುತ ಸರ್ಕಾರಿ ಮತ್ತು ಸರ್ಕಾರೇತರ ಕ್ಷೇತ್ರಗಳು ದೇಶದ ಈ ಮಕ್ಕಳ ಹೆಸರಿನಲ್ಲಿ ನಿಧಿಯನ್ನು ಸಜ್ಜುಗೊಳಿಸುತ್ತಿವೆ. ಹೆಚ್ಚಿನ ನಿಧಿಯನ್ನು ಆಹಾರ, ಶಿಕ್ಷಣ, ಲಸಿಕೆ, ಆಟದ ಜಾಗ, ಇತ್ಯಾದಿ ವಿಭಾಗಗಳಿಗೆಂದು ಸಂಗ್ರಹಿಸಲಾಗುತ್ತಿದೆ ಮತ್ತು ಕಾರ್ಯ ಯೋಜನೆಗಳನ್ನು ಅದಕ್ಕೆ ಅನುಗುಣವಾಗಿ ರಚಿಸಲಾಗುತ್ತಿದೆ.

ಸರ್ಕಾರೇತರ ಸಂಸ್ಥೆಗಳು (NGO) ತಮ್ಮ ಕೆಲಸದ ಬಗ್ಗೆ ಬರೆಯುವಾಗ, ಅಥವಾ ಮಕ್ಕಳ ಪರಿಸ್ಥಿತಿಯ ಬಗೆಗಿನ ಮೌಲ್ಯಮಾಪನಕ್ಕಾಗಿ ಕಾರ್ಯಕ್ಷೇತ್ರಕ್ಕೆ ಹೋದಾಗ, ಮಕ್ಕಳ ಜೀವನವನ್ನು 'ಬೆಳವಣಿಗೆ', 'ಉಳಿವು', 'ರಕ್ಷಣೆ',ಮತ್ತು 'ಭಾಗವಹಿಸುವಿಕೆ' ಎಂದು ವಿಭಾಗಗಳಲ್ಲಿ ವರ್ಗೀಕರಿಸುತ್ತವೆ. ಈ ನಾಲ್ಕು ಪ್ರವರ್ಗಗಳ ಮಕ್ಕಳ ಹಕ್ಕುಗಳು ಒಂದನ್ನೊಂದು ವಿಭಾಗಿಸುತ್ತವೆ ಮತ್ತು ವ್ಯಾಪಿಸುತ್ತಿವೆ ಎನ್ನುವುದನ್ನು ಹೆಚ್ಚಿನ ಜನರು ಒಪ್ಪಿಕೊಳ್ಳುತ್ತಾರಾದರೂ, ಯುಎನ್‌ಸಿಆರ್‌ಸಿ(UNCRC)ಯು ನಿಧಿ ಸಂಗ್ರಹಣೆಯ ವಿಧಾನಗಳಿಗೆ ಮತ್ತು ಪ್ರಸ್ತಾಪಗಳ ರಚನೆಗೆ ಚೌಕಟ್ಟಾಗಿ ಉಳಿದಿರುವ ಕಾರಣ ಕೆಲವೇ ಕೆಲವರು ಬಾಲ್ಯದ ಬಗ್ಗೆ ಈ ವಿಭಾಗಗಳಾಚೆ ಯೋಚಿಸುತ್ತಾರೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ತಮ್ಮ ಜೀವನದಲ್ಲಿ ರಾಜ್ಯದ ನೆರವು ಅಗತ್ಯವಿರುವಂತೆ ಕಾಣುವ ಮಕ್ಕಳನ್ನು (ಅತೀ ಕಡಿಮೆ ಸವಲತ್ತು ಹೊಂದಿರುವ ಅಥವಾ ಮೂಲೆಗುಂಪಾದ ಮಕ್ಕಳು) ಅವರ 'ಅಗತ್ಯಗಳು' ಎಂದು ಯುಎನ್‌ಸಿಆರ್‌ಸಿ (UNCRC)ಯ ಸ್ವರೂಪಕ್ಕೆ ಹೊಂದಿಕೊಳ್ಳುವ ಹಾಗೆ ವಿಭಜಿಸಲಾಗಿದ್ದು ನಂತರ ವಿವಿಧ ನೀತಿಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳ ಮೂಲಕ ಅವುಗಳನ್ನು ಪೂರೈಸಲಾಗುತ್ತವೆ.

ಓಲ್ಗಾ ನ್ಯೂವೆನ್ಹ್ಯೂಸ್ (Olga Nieuwenhuys) ರವರು 2009ರಲ್ಲಿ, "*Childhood (ಚೈಲ್ಡ್‌ಹುಡ್)*" ನ ಸಂಪಾದಕೀಯದಲ್ಲಿ ಸರಿಯಾಗಿಯೇ ಕೇಳಿದ್ದರು, "ಭಾರತೀಯ ಬಾಲ್ಯಾವಸ್ಥೆ ಎಂಬುದೊಂದು ಇದೆಯೇ?"[2] ಭಾರತದಲ್ಲಿ ಮುಖ್ಯವಾಗಿ ಬಾಲ್ಯವನ್ನು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವರು ಹುಟ್ಟುಹಾಕಬಹುದಾದ ಸಮಸ್ಯೆಗಳು ಎನ್ನುವ ಪರಿಭಾಷೆಗಳಲ್ಲಿಯೇ ಯೋಚಿಸಲಾಗುತ್ತದೆ ಎನ್ನುವುದು ಅವರ ವಾದವಾಗಿತ್ತು. ಸಮಸ್ಯೆಗಳ ಮೇಲಿನ ಗಮನವು, "ಬಾಲ್ಯಾವಸ್ಥೆಗೆ ಯಾವುದು ಅನಪೇಕ್ಷಿತವೋ ಅದನ್ನು ಬಗೆಹರಿಸಿ ಸರಿಮಾಡುವುದು ಮತ್ತು ಯಾವುದು ಅನಪೇಕ್ಷಿತ ಅಲ್ಲವೋ ಅದನ್ನು ನಿರ್ಲಕ್ಷಿಸಬಹುದು ಎಂದು ಭಾರತದ ಮಕ್ಕಳ ಜೀವನ ಪ್ರಪಂಚವನ್ನು ದ್ವಂದ್ವ ಸರಣಿಗಳಲ್ಲಿ ವಿಭಾಗಿಸಿ ಚಿತ್ರಿಸುತ್ತದೆ"[3] ಎಂದವರು ಅಭಿಪ್ರಾಯ ಹೊಂದಿದ್ದರು. ಉದಾಹರಣೆಗೆ, ಮಕ್ಕಳು ಹಸಿವಿನಿಂದ ಬಳಲುತ್ತಿದ್ದಾರೆ ಅಥವಾ ಅವಿದ್ಯಾವಂತರಾಗಿ ಉಳಿದರೆ ನಾವು ಒಂದು ಸಮಾಜವಾಗಿ ಅದನ್ನು 'ಅನಪೇಕ್ಷಿತ' ಎಂದು ತಿಳಿಯುತ್ತೇವೆ ಮತ್ತು ಆ ಕಾರಣ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು, ಹಾಗೂ ವ್ಯಕ್ತಿಗಳು, ಈ ಸಮಸ್ಯೆಗಳನ್ನು ಕನಿಷ್ಟ ಒಂದು ಅಥವಾ ಎರಡು ಮಕ್ಕಳಿಗಾದರೂ ಪರಿಹಾರ ನೀಡಲು ಕಾರ್ಯಕ್ರಮಗಳನ್ನು ಯೋಜಿಸುತ್ತಾರೆ. ಮಕ್ಕಳು ಒಂಟಿಯಾಗಿರಬಾರದು ಅಥವಾ ಮಗುವೇ ಮನೆಯ ಮುಖ್ಯಸ್ಥ ಆಗಿರುವ ಕುಟುಂಬಗಳಲ್ಲಿ ಇರಬಾರದು ಎಂಬ ನಂಬಿಕೆ ಇರುವುದರಿಂದ ಕಾರ್ಯ ಯೋಜನೆಗಳು ಮಕ್ಕಳನ್ನು ಸಂಸ್ಥೆಗಳಲ್ಲಿ ಅಥವಾ ಅನಾಥಾಲಯಗಳಲ್ಲಿ ಇರಿಸುವುದರ ಮೂಲಕ ಅವರಿಗೆ 'ಆಶ್ರಯವನ್ನು' ಖಚಿತಪಡಿಸುತ್ತವೆ. ಆದಾಗ್ಯೂ, ಆಟ ಎನ್ನುವುದು ಮಕ್ಕಳ ಜೀವನದ ಒಂದು ಅಂಶವಾಗಿದ್ದರೂ ಅದನ್ನು ಪದೇಪದೇ ನಿರ್ಲಕ್ಷಿಸಲಾಗುತ್ತದೆ. ಮಕ್ಕಳು ಆಟವಾಡಲು ಒಂದಲ್ಲ ಒಂದು ರೀತಿಯಲ್ಲಿ ಸಮಯ ಹುಡುಕಿಕೊಳ್ಳುತ್ತಾರೆ ಎನ್ನುವ ಗೃಹೀತವಿರುವುದರಿಂದ ಎನ್‌ಜಿಓ(NGO)ಗಳ ಕಾರ್ಯಕ್ರಮಗಳಲ್ಲಿ ಮಗುವಿನ ಜೀವನದ ಈ ಅಂಶವನ್ನು ನಾವು ನೋಡುವುದು ವಿರಳ.[4] ಇನ್ನೊಂದು ರೀತಿಯಲ್ಲಿ ನೋಡುವುದೆಂದರೆ 'ವಂಚಿತ ಮಕ್ಕಳ' ಜೀವನದಲ್ಲಿ ಆಟವು ಅಗತ್ಯವೆಂದು ಪರಿಗಣಿಸದಿರುವುದರಿಂದ ಅದನ್ನು ನಿರ್ಲಕ್ಷಿಸಬಹುದು ಎನ್ನುವ ಸಮರ್ಥನೆ.[5]

ಭಾರತದಲ್ಲಿ 'ಅಭಾವ'ದ ರಾಜಕೀಯದೊಂದಿಗೆ ತೊಡಗಿಸಿಕೊಳ್ಳಲು ಹಿಂಜರಿಕೆ ಇರುವುದರಿಂದ, ಬಹುಶಃ 'ಮುಖ್ಯ' ಸಮಸ್ಯೆಗಳ ಮೇಲೆ ಗಮನ ಹರಿಸುವುದು ಮತ್ತು ಎಲ್ಲಾ ಮಕ್ಕಳ ಹಕ್ಕುಗಳನ್ನು ಖಚಿತಪಡಿಸುವ ಅಗತ್ಯತೆ ಇದೆ ಎಂದು ವಾದಿಸಬಹುದು. ನ್ಯೂವೆನ್ಹ್ಯೂಸ್ (Nieuwenhuys)ರ ಪ್ರಶ್ನೆಯು ನಮಗೆ, ಅಭಾವದ ರಾಜಕೀಯದೊಂದಿಗೆ ನಾವು ಹೇಗೆ ತೊಡಗಿಸಿಕೊಂಡಿದ್ದೇವೆ ಎನ್ನುವುದರ ಬಗ್ಗೆ ಮರುಚಿಂತನೆ ಮಾಡುವ ಅವಕಾಶವನ್ನು ನೀಡುತ್ತದೆ. ಪ್ರಕ್ರಿಯೆಯ ಒಂದು ಹಂತದಲ್ಲಿ, ಎಲ್ಲಾ ಕ್ಷೇತ್ರದ ಕಾರ್ಯ ಯೋಜನೆಗಳನ್ನು ಒಟ್ಟುಗೂಡಿಸಿ ಬಾಲ್ಯದ ಅಭಾವಗಳ ಇರುವಿಕೆ, ಅದರ ಸ್ವರೂಪ ಮತ್ತು ಕಾರಣಗಳನ್ನು ಸಮಗ್ರವಾಗಿ ಅರ್ಥಮಾಡಿಕೊಂಡು ಅವುಗಳ ಜೊತೆ ತೊಡಗಿಸಿಕೊಳ್ಳಲು ನಾವು ಸಮರ್ಥರಾಗಿದ್ದೇವೆಯೇ ಎಂದು ನೋಡಲು ಒಂದು ಅವಕಾಶವದು. ನಾವು ಸಾಮಾನ್ಯವಾಗಿ ಸಮರ್ಥಿಸಿಕೊಂಡಂತೆ ಮಕ್ಕಳು ನಿಜವಾಗಿಯೂ ಈ ಕಾರ್ಯ ಯೋಜನೆಗಳ ಕೇಂದ್ರಬಿಂದುಗಳಾಗಿದ್ದಾರೆಯೇ? ಅಥವಾ ಆ ಕಾರ್ಯಕ್ರಮಗಳಿಗೆ ಪ್ರಾಸಂಗಿಕವೇ ಎಂದು ಆಲೋಚಿಸಲು ಅವರು ಒತ್ತಾಯಿಸುತ್ತಾರೆ.

***

ಭಾರತದಲ್ಲಿ ಹಲವು ಬರಹಗಾರರು ಮತ್ತು ಚಳುವಳಿಗಾರರು ಬಾಲ್ಯದ ಪರಿಕಲ್ಪನೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳುವುದಲ್ಲದೆ, ಮಕ್ಕಳ ವಿಚಾರಗಳಿಗೆ ಸಂಬಂಧಿಸಿದಂತೆ ಸಾಂವಿಧಾನಿಕ ಅಸಮಂಜಸತೆ, ಪಕ್ಷಪಾತ ನೀತಿನಿರೂಪಣೆ ಮತ್ತು ಅನುಷ್ಠಾವನ್ನು ಪ್ರಭಾವಿಸುವ ಅಗೋಚರ ಅಸಮಾನತೆಗಳು, ಬಾಲ್ಯದ ಬಗ್ಗೆ ಧ್ರುವೀಕರಿಸಲಾದ ತಿಳುವಳಿಕೆಯೊಂದಿಗೆ ಮುಂದುವರೆಯುವ ಬಗ್ಗೆ ಕಾಳಜಿ ಹೊಂದಿದ್ದಾರೆ.

1996ರಲ್ಲಿ ಆಶಾ ಬಾಜ್ಪೈ (Asha Bajpai)ರವರು[6] ಭಾರತದ ಸಂವಿಧಾನವು ಬಾಲ್ಯವನ್ನು ಪರಿಗಣಿಸುವುದರ ವಿವಿಧ ರೀತಿಗಳ ಬಗ್ಗೆ ಮತ್ತು ಹೇಗೆ ಶಾಸನಕ್ಕನುಗುಣವಾಗಿ ಪರಿಪಕ್ವತೆಯ ವಯಸ್ಸು/ಬಾಲ್ಯದ ಮುಕ್ತಾಯದ ಗಡಿಯ ವಯಸ್ಸಿನಲ್ಲಿ ವ್ಯತ್ಯಾಸಗಳಿವೆಯೆಂಬುದನ್ನು ಒಂದು ಪಟ್ಟಿ ಮಾಡಿ ತೋರಿಸಿದರು. ಕುತೂಹಲಕಾರಿ ವಿಷಯವೇನೆಂದರೆ, 18ವರ್ಷದ ಪುರುಷ ವ್ಯಕ್ತಿಯು ಮತ ಚಲಾಯಿಸಬಹುದು ಆದರೆ ಮದುವೆಯಾಗಲು ಮುಕ್ತನಲ್ಲ. ಅವನು 18 ವಯಸ್ಸಿನಲ್ಲಿ ಪಿತ್ರಾರ್ಜಿತವನ್ನು ನಿರ್ವಹಿಸುವ ಸಾಮರ್ಥ್ಯವನ್ನುಳ್ಳವನೆಂದು ಪರಿಗಣಿಸಲಾಗುವುದಿಲ್ಲ; ಅದಕ್ಕೆ ಸೂಕ್ತ ವಯಸ್ಸು 21. ಒಬ್ಬ ಹಣ ಗಳಿಸಲು ಪ್ರಾರಂಭಿಸಬಹುದಾದ ಕಾನೂನುಬದ್ಧ ವಯಸ್ಸು 14 ಆಗಿದೆ. 6 ವರ್ಷದವರೆಗೆ ಸರ್ಕಾರ ಮಕ್ಕಳ ಆರೋಗ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ. ಯಾರೇ ಒಬ್ಬ ವ್ಯಕ್ತಿಯು ತನ್ನ ಅಪರಾಧಗಳಿಗೆ ಹೊಣೆಯಾಗುವ ವಯಸ್ಸು 18 ಆಗಿದೆ. ಈ ಎಲ್ಲಾ ಚಟುವಟಿಕೆಗಳಿಗೆ ಯಾವ ವಯಸ್ಸಿನಲ್ಲಿ ಯಾವುದಕ್ಕೆ ಅನುಮತಿ ಇದೆ/ಇಲ್ಲ ಎಂಬ ಕಾನೂನಿನ ಪರಿಮಿತಿಯನ್ನು ನಿರ್ಧರಿಸುವುದು ಯುಎನ್‌ಸಿಆರ್‌ಸಿ

(UNCRC)ಯ ಅಂತರರಾಷ್ಟ್ರೀಯ ದಾಖಲೆಯಾಗಿದ್ದು ಅದು 18 ಮತ್ತು ಅದರ ಕೆಳಗಿನ ವಯಸ್ಸಿನ ವ್ಯಕ್ತಿಗಳನ್ನು 'ಮಕ್ಕಳು' ಎಂದು ಪರಿಗಣಿಸಲಾಗುವುದು ಎಂಬ ಷರತ್ತನ್ನು ವಿಧಿಸುತ್ತದೆ. ಆದಗ್ಯೂ, ಶಾಸಾನದ ಹಿನ್ನಲೆಯಲ್ಲಿ, ಮಕ್ಕಳು ಯಾವ ವಯಸ್ಸಿನಲ್ಲಿ ಮತ್ತು ಅವರ ಜೀವನದ ಯಾವ ವಿಷಯಗಳ ಕುರಿತು ದುರ್ಬಲರು/ಸಬಲರೆಂದು ಪರಿಗಣಿಸುವ ನಿರ್ಧಾರದಲ್ಲಿ ಹಲವಾರು ಅಸ್ಪಷ್ಟತೆಗಳಿವೆ. ಇದನ್ನು ಇನ್ನೂ ಗಂಭೀರವಾಗಿ ಪರೀಕ್ಷಿಸುವುದರಿಂದ, ಲೈಂಗಿಕತೆ, ಸಂಪತ್ತು ಮತ್ತು ಪೌರತ್ವಕ್ಕೆ ಸಂಬಂಧಿಸಿದಂತೆ ಕೆಲವು ಪೂರ್ವಾಗ್ರಹಗಳನ್ನು ಹೊಂದಿರುವುದನ್ನು ಮತ್ತು ಅವು ವಸಾಹತುಶಾಹಿ ಮತ್ತು ಬ್ರಾಹ್ಮಣೀಯ ಅಸ್ಮಿತೆಯ ಪರಿಕಲ್ಪನೆಗಳಲ್ಲಿ ನೆಲೆಗೊಂಡಿರುವುದನ್ನು ಬಹಿರಂಗಪಡಿಸಬಹುದು. ರಾಜ್ಯ ಮತ್ತು ಮಗುವಿನ ಸಂಬಂಧವೂ ಸಹ ಅಸ್ಪಷ್ಟವಾಗಿದೆ. ಮಗುವಿನ ಜೀವನದ ಯಾವ ಹಂತದವರಗೆ ಮತ್ತು ಯಾವ ವಿಷಯಗಳ ಕುರಿತು ರಾಜ್ಯವು ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧವಾಗಿದೆ ಎನ್ನುವುದು ಮಗುವಿನ 6 ರಿಂದ 21ವರ್ಷದವರೆಗೆ ಬದಲಾಗುತ್ತದೆ.

ಭಾರತದಲ್ಲಿ ಹೆಣ್ಣು ಮಕ್ಕಳಿಗೆ ಅವಕಾಶ ನೀಡದಿರುವ ಮತ್ತು ಹೊರತುಪಡಿಸುವ ಮೂಲಭೂತವಾಗಿ ಪುರುಷ ಲಕ್ಷಣಗಳ ಪೂರ್ವಾಗ್ರಹಗಳನ್ನು ಹೊಂದಿರುವ ಶಾಲಾ ಶಿಕ್ಷಣದ ಬಗ್ಗೆ ಬರೆದವರಲ್ಲಿ ಕೃಷ್ಣ ಕುಮಾರ (Krishna Kumar) ಕೂಡ ಒಬ್ಬರು. ಪಶ್ಚಿಮ ಬಂಗಾಳದಲ್ಲಿ ಕಾರ್ಯಕರ್ತರಾದ ದೆಬೊಲಿನಾ ದತ್ತ (Debolina Dutta) ಮತ್ತು ಔಶಿಕ್ ಸರ್ಕಾರ್ (Oishik Sircar) ಮಾಡಿರುವ ಕೆಲಸ ತೋರಿಸುವುದೇನೆಂದರೆ, ಲೈಂಗಿಕ ಕಾರ್ಯಕರ್ತೆಯರ ಮಕ್ಕಳು ತಮ್ಮ ತಾಯಂದಿರ ಜೀವನದ ಘನತೆಯನ್ನು ಎತಿ ಹಿಡಿಯುವ ಪರಿಭಾಷೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ; ಇದು ಅವರನ್ನು ನಿರಂತರವಾಗಿ ಶೋಷಿತಲ್ಪಟ್ಟವರೆಂದು ಚಿತ್ರಿಸುವ ಎನ್‌ಜಿಓ (NGOs) ಗಳ ದೃಷ್ಟಿಗಿಂತ ವಿಭಿನ್ನವಾಗಿದೆ.[7] ಹೈದರಾಬಾದ್ ಮೂಲದ ಎನ್‌ಜಿಓ ಆದ ಅನ್ವೇಶಿ (Anveshi) ಯ ಸದಸ್ಯರಾದ ಲೇಖಕರು ಇತ್ತೀಚೆಗೆ ಮುಖ್ಯವಾಹಿನಿಯಲ್ಲಿ ಇಲ್ಲದ ಮಕ್ಕಳ ದೈನಂದಿನ ಜೀವನಕ್ಕೆ ಸಂಬಂಧಿಸಿದಂತಹ ವಿಷಯಗಳನ್ನು ಒಳಗೊಂಡ ಕಥೆ ಪುಸ್ತಕಗಳ ಸರಣಿಯನ್ನು ಹೊರತಂದಿದ್ದಾರೆ. ಪೂರ್ಣಿಮಾ ಮಂಕೇಕರ್ (Poornima Mankekar)[8] ರವರು ಸಾರ್ವಜನಿಕ ಚರ್ಚೆಗಳಲ್ಲಿ ಬಾಲ್ಯದ ಅಸ್ಮಿತೆಯು ಹೇಗೆ ಬೇರೆ ಎಲ್ಲಾ ಅಸ್ಮಿತೆಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತದೆ ಎಂದು ನಿರೂಪಿಸಲು ಒಂದು ಪುಟ್ಟ ಮುಸ್ಲಿಂ ಹುಡುಗಿಯ (Ameena(ಅಮೀನಾ)) ಪ್ರಸಂಗವನ್ನು ವಿಶ್ಲೇಷಿಸುತ್ತಾರೆ ಮತ್ತು ಆ ಮೂಲಕ ಅವರು ಸಾರ್ವಜನಿಕ ವಲಯದಲ್ಲಿ ರಾಷ್ಟ್ರ ನಿರ್ಮಾಣ ಚಟುವಟಿಕೆಗಳಲ್ಲಿ ಮಕ್ಕಳ ಅಸ್ಮಿತೆಯನ್ನು ಬಳಸುವ ಹಿಂದಿರುವ ರಾಜಕೀಯವನ್ನು ಅನಾವರಣಗೊಳಿಸುತ್ತಾರೆ.

ಭಾರತದಲ್ಲಿ ಬಾಲ್ಯದ ಸೂಕ್ಷ್ಮ ವ್ಯತ್ಯಾಸಗಳು ಮತ್ತು ವಿರೋಧಾಭಾಸಗಳನ್ನು ಅರ್ಥಮಾಡಿಕೊಳ್ಳಲು ಬದ್ಧರಾದ ಶ್ರದ್ಧೆಯುಳ್ಳ ಕೆಲವರು ಇದ್ದಾರೆ. ಅವರು ಅನುಭವಗಳ ಬಹುತ್ವಕ್ಕೆ ಅನುವು ಮಾಡಿಕೊಡುವ ಮತ್ತು ಅದರೊಡನೆ ತೊಡಗಿಸಿಕೊಳ್ಳುವ ಹಾಗೂ ಮಕ್ಕಳನ್ನು ಒಂದು ರಚನಾತ್ಮಕ ಪ್ರವರ್ಗವಾಗಿ ನಿರೂಪಿಸುವ ಸಾಮಾನ್ಯತೆಗಳ ಬಗ್ಗೆ ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ಬದ್ಧರಾಗಿದ್ದಾರೆ.

***

1967ರಲ್ಲಿ ಫಿಲೀಪ್ ಏರೀಸ್ (Philippe Aries) ರವರ "*Centuries of Childhood* (ಸೆಂಚುರೀಸ್ ಆಫ್ ಚೈಲ್ಡ್‌ಹುಡ್)" ಕೃತಿಯ ಪ್ರಕಟಣೆಯ ನಂತರ ಯುರೋಪಿನಲ್ಲಿ ಬಾಲ್ಯದ ಅಧ್ಯಯನದಲ್ಲಿ ಆಸಕ್ತಿಯು ಉಕ್ಕೇರಿತೆಂದು ಬಹುತೇಕ ಎಲ್ಲಾ ವಿದ್ವಾಂಸರೂ ಒಪ್ಪುತ್ತಾರೆ. ಪ್ರೌಢಾವಸ್ಥೆಗಿಂತ ಬಾಲ್ಯವು ಒಂದು ವಿಭಿನ್ನ ಮತ್ತು ಪ್ರತ್ಯೇಕ ಹಂತವೆನ್ನುವ ಕಲ್ಪನೆಯು ಆಧುನಿಕವಾದದ್ದು ಮತ್ತು ಮಧ್ಯಯುಗದ ಅವಧಿಯಲ್ಲಿ ಮಕ್ಕಳನ್ನು ಪ್ರತ್ಯೇಕ ಜೀವಿಗಳಂತೆ ಅಲ್ಲದಿದ್ದರೂ ಸಣ್ಣ ವಯಸ್ಕರಂತೆ ಅರ್ಥೈಸಿಕೊಳ್ಳಲಾಗಿತ್ತು ಎಂದು ಅವರು ವಾದಿಸಿದರು. ಏರೀಸ್‌ರ ಕೃತಿಯನ್ನು ಅವರ ಗೃಹೀತಗಳು, ವಿಧಾನ ಮತ್ತು ಚೌಕಟ್ಟಿನ ವಿಮರ್ಶೆಗಳನ್ನೊಳಗೊಂಡಂತೆ ಅನೇಕ ಹಂತಗಳಲ್ಲಿ ಚರ್ಚಿಸಲಾಗಿದೆ. ಆದರೆ ಈ ಕೃತಿಯು ಸಾಮಾಜಿಕ ವಿಜ್ಞಾನಗಳ ಅಧ್ಯಯನದಲ್ಲಿ ಹಿಂದೆಂದೂ ಕಂಡಿರದ ಬಾಲ್ಯದ ಪರಿಕಲ್ಪನೆಯಲ್ಲಿ ಆಸಕ್ತಿಯನ್ನು ಹುಟ್ಟಿಸಿದೆ ಎಂದು ವ್ಯಾಪಕವಾಗಿ ಒಪ್ಪಿಕೊಂಡAತಿದೆ. ಈ ಆಸಕ್ತಿಯನ್ನು ಅನೇಕ ವೇಳೆ 'ಬಾಲ್ಯದ ಸಾಮಾಜಿಕ ಅಧ್ಯಯನಗಳು' ಎಂದು ಕರೆಯಲಾಗುತ್ತದೆ.

ಬಾಲ್ಯದ ಸಾಮಾಜಿಕ ಅಧ್ಯಯನದೊಳಗೆ ಬಾಲ್ಯದ ಬಗೆಗಿನ ಚರ್ಚೆಗಳು, ಪ್ರಧಾನ ವಿಷಯಗಳಾದ ರಚನೆ ಮತ್ತು ಸ್ವಾಯತ್ತ ಕರ್ತೃತ್ವ (agency)ದ ಮೇಲೆ ಕೇಂದ್ರಿತವಾಗಿದ್ದು, ವಿದ್ವಾಂಸರು ಬಾಲ್ಯವು ಸಮಾಜದಲ್ಲಿ ಅಧಿಕಾರವನ್ನು ಹಂಚಿಕೊಳ್ಳುವುದನ್ನು ನಿರ್ಧರಿಸುವ ಒಂದು ಸಾಮಾಜಿಕ ರಚನೆ ಎಂದು ವಾದಿಸುತ್ತಾರೆ. ಆದಾಗ್ಯೂ, ಈ ರಚನೆಯೊಳಗೆ ಮಕ್ಕಳು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ತೊಡಗಿಸಿಕೊಳ್ಳುವುದು ನಮಗೆ ಬಾಲ್ಯವನ್ನು ಕೇವಲ ಕಾರಣಾತ್ಮಕ ಪರಿಭಾಷೆಗಿಂತ ಹೆಚ್ಚಿನದಾಗಿ ನೋಡಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ಈ ಕ್ಷೇತ್ರದಲ್ಲಿ ಹೆಚ್ಚು ವ್ಯಾಪಕವಾಗಿ ಪ್ರಕಟವಾದ ಇಬ್ಬರು ಲೇಖಕರು ಬರೆಯುತ್ತಾರೆ: "ಬಾಲ್ಯವು ಒಂದು ಸಮಾಜದ ಸಾಮಾಜಿಕ ರಚನೆಯಿಂದ ರೂಪುಗೊಂಡ ಮತ್ತು ಅದರಲ್ಲೇ ಸ್ಥಿರವಾಗಿ ನೆಲೆಗೊಂಡ ಒಂದು ಸಾಮಾಜಿಕ ಕ್ಷೇತ್ರಕ್ಕೆ ಸೇರಿದ ವಿಷಯವೆಂದು ಚಿತ್ರಿಸಲಾಗಿದೆ, ಆದರೆ ಈ ಸಾಮಾನ್ಯವಾದ ಸಾಮಾಜಿಕವಾಗಿ ರಚಿಸಲ್ಪಟ್ಟ ವರ್ಗದೊಳಗೆ ವೈವಿಧ್ಯತೆಯನ್ನು ಸೃಷ್ಟಿಸಲು ಮರುಸೃಷ್ಟಿಸಲು ಯಶಸ್ವಿಯಾಗುವ ಭವಿಷ್ಯದ ಪೀಳಿಗೆಯ ಮಕ್ಕಳ ಕ್ರಿಯೆಗಳಿಂದಲೂ ಕೂಡ

ರೂಪಿಸಲ್ಪಟ್ಟಿದೆ.” (James, Allison and Adrian (ಜೇಮ್ಸ್, ಅಲಿಸನ್ ಮತ್ತು ಏಡ್ರಿಯನ್), 2001. ಪುಟ.34)

ಲೀನಾ ಎಲಾನೆನ್ (Leena Alanen)ರವರು ಬಾಲ್ಯವನ್ನು ಕೆಲವು ಪ್ರಕ್ರಿಯೆಗಳ ಮೂಲಕ, ಕೆಲವು ಜನರು ಮಕ್ಕಳಂತೆ ಮತ್ತು ಇತರರು ವಯಸ್ಕರಂತೆ ನಿರೂಪಿಸಲ್ಪಡುವ ಒಂದು ಪೀಳಿಗೆಯ ರಚನೆ (generational structure) ಯಾಗಿ ನೋಡುತ್ತಾರೆ. ಇದು ಸಂಪನ್ಮೂಲಗಳ ಲಭ್ಯತೆಯಲ್ಲಿನ ಅಸಮಾನತೆ, ಮಕ್ಕಳ ಅಧೀನತೆ ಮತ್ತು ಸಮಾಜಕ್ಕೆ ಅವರ ಕೊಡುಗೆಯನ್ನು ಕಡೆಗಣಿಸಲ್ಪಡುವುದನ್ನು ಅರ್ಥ ಮಾಡಿಕೊಳ್ಳಲು ಆಧಾರವಾಗುತ್ತದೆ. ವಯಸ್ಸನ್ನು ಅಳತೆಗೋಲನ್ನಾಗಿ ಬಳಸಿಕೊಂಡು, ನಮ್ಮ ಸಮಾಜದಲ್ಲಿ ಅಧಿಕಾರ ಹಂಚಿಕೆಯಾಗುವ ರೀತಿಗಳನ್ನು ಪರಿಶೋಧಿಸಲು ಅವರ ವಿಧಾನವು ಅವಕಾಶ ಮಾಡಿಕೊಡುತ್ತದೆ.

ಆಲೆನ್ ಪ್ರೌಟ್‌ರವರು *“The Future of Childhood* (ದ ಫ್ಯೂಚರ್ ಆಫ್ ಚೈಲ್ಡ್‌ಹುಡ್)”(2005)ನಲ್ಲಿ, ರಚನೆ/ಸ್ವಾಯತ್ತ ಕರ್ತೃಗಳು (agencies), ಮಗು/ವಯಸ್ಕ, ಸಬಲತೆ/ದುರ್ಬಲತೆಯ ತರ್ಕವನ್ನು ಮೀರಿ ಮುಂದುವರಿಯಬೇಕೆಂದು ವಾದಿಸುತ್ತಾರೆ. ಜೀವನಶಾಸ್ತ್ರದಲ್ಲಿರುವ ಬಾಲೀಶತೆಯ ಅರ್ಥವನ್ನು ಮತ್ತು ಬಾಲ್ಯವನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆಯಿರುವ ಆಕ್ಟರ್-ನೆಟ್‌ವರ್ಕ ಸಿದ್ಧಾಂತ (Actor-Network Theory) (Deleuze (ಡುಲೂಜ್) ಮತ್ತು Guattari (ಗ್ವಟಾರಿ)ಯಿಂದ ತೆಗೆದುಕೊಳ್ಳಲಾಗಿದೆ) ಮತ್ತು ಕಾಂಪ್ಲೆಕ್ಸಿಟಿ ಸಿದ್ಧಾಂತಗಳ (Complexity Theory) ಚೌಕಟ್ಟನ್ನು ಬಳಸಿ ಆ ಮೂಲಕ ಎರಡು ವೈರುಧ್ಯಗಳ ನಡುವೆ ಆಗಾಗ್ಗೆ ತೂಗುಯ್ಯಾಲೆಯಾಡುವ ಬಾಲ್ಯದ ಅಧ್ಯಯನಗಳನ್ನು ಪರೀಕ್ಷಿಸಲು ಸಹಕರಿಸಬಹುದು ಎನ್ನುವ ಕಾರಣ ಬಾಲ್ಯದ ಅಧ್ಯಯನಗಳನ್ನು ನಿಜವಾಗಿಯೂ ಅಂತರಶಾಸ್ತ್ರೀಯವನ್ನಾಗಿಸಲು ಅವರು ವಾದಿಸುತ್ತಾರೆ.

ಅವರ ಇತ್ತೀಚಿನ “*Childhood* (ಚೈಲ್ಡ್‌ಹುಡ್)” ನ ಸಂಪಾದಕೀಯದಲ್ಲಿ ‘ಕೇಳುತ್ತಲೇ ಇರಿ, ಏಕೆ ಬಾಲ್ಯ? ಏಕೆ ಮಕ್ಕಳು? ಏಕೆ ಜಾಗತಿಕ?’[9] ಎಂದು ಓಲ್ಗಾ ನ್ಯೂವೆನ್ಹೈಸ್ (Olga Nieuwenhuys) ತಮ್ಮ ಕೊನೆಯ ವಾದವನ್ನು ಮಂಡಿಸುತ್ತಾರೆ. ಈ ಕ್ಷೇತ್ರವನ್ನು ಜೀವಂತವಾಗಿ ಮತ್ತು ವಿಮರ್ಶಾತ್ಮಕವಾಗಿಡಲು ಒತ್ತಾಯಿಸುತ್ತಾ, ಬಾಲ್ಯದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳುವುದನ್ನು ಮತ್ತು “ಬಾಲ್ಯವನ್ನು ಜಾಗತಿಕ ಅಧಿಕಾರಕ್ಕೆ ಗುರಿಯಾಗಿಸುವ ಗುಣಲಕ್ಷಣಗಳ ವಾಹಕರಾಗಿ ಇರುವುದನ್ನು ಹೊರತುಪಡಿಸಿ ಮಕ್ಕಳು ನಿಜವಾಗಿಯೂ ಆಸಕ್ತಿದಾಯಕವೇ?”ಎಂದು ಮುಂತಾದ ಪ್ರಶ್ನೆಗಳನ್ನು ಮುಂದುವರಿಸಲು ಸಂಶೋಧಕರನ್ನು ಪ್ರಚೋಧಿಸುತ್ತಾರೆ. (ಪುಟ.295)

***

ಆ ಕೊನೆಯ ಹೇಳಿಕೆಯೊಂದಿಗೆ ನಾವು ಅದೇ ಲೇಖಕರು ಒಂದು ವರ್ಷದ ಹಿಂದೆ ಕೇಳಿದ ಪ್ರಶ್ನೆಗೇ ಹಿಂತಿರುಗುತ್ತೇವೆ: ಭಾರತೀಯ ಬಾಲ್ಯಾವಸ್ಥೆ ಎಂಬುದೊಂದು ಇದೆಯೇ? ಇದಕ್ಕೆ ನಾವು ನಮ್ಮದೇ ಆದ ಪ್ರಶ್ನೆಗಳನ್ನು ಸೇರಿಸಬೇಕು: ಬಾಲ್ಯವು ರಾಷ್ಟ್ರದ ಭವಿಷ್ಯವನ್ನು ಪರಿಣಮಿಸುವ ಕಾರಣದಿಂದಾಗಿ ನಾವು ಅದರ ಅಧ್ಯಯನ ಮಾಡಬೇಕೇ? ಅದನ್ನು ಅರ್ಥ ಮಾಡಿಕೊಳ್ಳಬೇಕೇ? ಮತ್ತು ಅದರೊಂದಿಗೆ ತೊಡಗಿಸಿಕೊಳ್ಳಬೇಕೇ? ಮಕ್ಕಳು ವಯಸ್ಕರಾಗುವುದು ಅನಿವಾರ್ಯ ಮತ್ತು ಆ ಹಂತದಲ್ಲಿ ಸಮಾಜದ ಸಾಮಾಜಿಕ-ರಾಜಕೀಯ ರಚನೆಯಲ್ಲಿ ಅವರ ಭಾಗವಹಿಸುವಿಕೆ ನೈಜವಾಗುವುದು ಎನ್ನುವ ನಂಬಿಕೆಯ ಕಾರಣ ನಾವು ಬಾಲ್ಯಾವಸ್ಥೆಯೊಂದಿಗೆ ತೊಡಗಿಸಿಕೊಳ್ಳುವುದು ಸ್ವಭಾವಜನ್ಯ ಒಂದು ಉದ್ದೇಶ ಸಾಧನೆಗೆಂದೇ ಆಗಿರುವುದು ಎಂದು ಭಾವಿಸಬಹುದೇ? ಮಗುವಿನ ಹಕ್ಕು ಮತ್ತು ಮಗುವಿನ ಕಲ್ಯಾಣ ಕ್ಷೇತ್ರದ ತಜ್ಞರಿಗೆ ಬಾಲ್ಯದ ಪ್ರಧಾನ ಅರ್ಥದೊಂದಿಗೆ ತೊಡಗಿಸಿಕೊಳ್ಳುವ ಮತ್ತು ಅದನ್ನು ಗಂಭೀರವಾಗಿ ಪರೀಕ್ಷಿಸುವ ಅಗತ್ಯವಿದೆಯೇ? ಕಾಯಿದೆಗಳು ದೇಶದಲ್ಲಿ ಬಾಲ್ಯವನ್ನು ಹೇಗೆ ರೂಪಿಸುತ್ತವೆ? ಮತ್ತು ಭಾರತದಲ್ಲಿ ಕಾಯಿದೆ ಹಾಗೂ ಅದರ ಅನುಷ್ಠಾನ ಬಾಲ್ಯಕ್ಕೆ ಸಂಬಂಧಿಸಿದಂತೆ ಸಮಾನತೆ ಹಾಗೂ ನ್ಯಾಯದ ನಮ್ಮ ತಿಳುವಳಿಕೆಯನ್ನು ಹೇಗೆ ಪ್ರಭಾವಿಸಿದೆ?

ಮಗುವಿನ ಹಕ್ಕುಗಳಿಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳು, ಮಕ್ಕಳೆಂದರೆ ಯಾರು, ಅವರ ಅಗತ್ಯಗಳೇನು ಮತ್ತು ಈ ಅಗತ್ಯಗಳನ್ನು ಹೇಗೆ ಪೂರೈಸುವುದು ಎನ್ನುವುದರ ಒಂದು ನಿರ್ದಿಷ್ಟ ತಿಳುವಳಿಕೆಯ ಮೇಲೆ ಆಧಾರಿತವಾಗಿರುತ್ತವೆ. ಒಂದು ಕಾರ್ಯಕ್ರಮವನ್ನು ರಚಿಸುವಾಗ ತಾವು ಬಾಲ್ಯದ ಬಗ್ಗೆ ಒಂದು ನಿಶ್ಚಿತ ಕಲ್ಪನೆಯನ್ನು ಬೆಂಬಲಿಸುತ್ತಿದ್ದೇವೆ ಎನ್ನುವ ವಾಸ್ತವಾಂಶವನ್ನು ಬಹಳ ವಿರಳವಾಗಿ ಸಂಸ್ಥೆಗಳು ತಿಳಿದಿರುತ್ತವೆ. ಉದಾಹರಣೆಗೆ, 12ವರ್ಷದ ಕೆಳಗಿನ ಮಕ್ಕಳ ಜೊತೆ ಕೆಲಸ ಮಾಡುವ ಹಲವರು, ಸುರಕ್ಷಿತ ಜಾಗ/ ಆಶ್ರಯ ಗೃಹಗಳು, ಶಾಲೆ, ಅಂಗನವಾಡಿಗಳು, ಆರೋಗ್ಯ ಸೇವೆಗಳ ಮೇಲೆ ಗಮನ ಕೇಂದ್ರೀಕರಿಸಿದರೆ, ಹದಿಹರೆಯದವರ ಜೊತೆ ಕೆಲಸ ಮಾಡುವವರು 'ಜೀವನ ಕೌಶಲ್ಯಗಳು', 'ಔದ್ಯೋಗಿಕ ತರಬೇತಿ', 'ಕೋಪ ನಿಭಾವಣೆ', ಪಾಲ್ಗೊಳ್ಳುವಿಕೆಯ ಪೌರತ್ವ ಮತ್ತು ಇತರ ಅಂತಹುದೇ ವಿಷಯಗಳ ಕಡೆ ಹೆಚ್ಚು ಗಮನ ನೀಡುವುದು ಕಂಡು ಬರುತ್ತದೆ. ಕೆಲವರು ಮಾತ್ರ ಹದಿಹರಯದವರ ಆರೋಗ್ಯ ಮತ್ತು ಶಿಕ್ಷಣ ಹಕ್ಕಿನ ಅಗತ್ಯಗಳ ಕಡೆಗೆ ಗಮನ ಹರಿಸುತ್ತಾರೆ. ಒಂದು ರೀತಿಯಲ್ಲಿ ಸರಳೀಕರಿಸಿ ಹೇಳುವುದಾದರೆ, ಸಾಮಾನ್ಯವಾಗಿ 'ಬಾಲ್ಯ' ಎಂದು ಕರೆಯಲ್ಪಡುವ ಜೀವನದ ಈ ಹಂತದ ಬಗ್ಗೆ ಈ ಕೆಳಗಿನ ಕನಿಷ್ಟ ಎರಡು ಗೃಹೀತಗಳಿಗೆ ಒಂದು ರೀತಿಯ ಅನುಮೋದನೆ ಇದೆ:

- 12 ವಯಸ್ಸಿಗಿಂತ ಕೆಳಗಿನ ಮಕ್ಕಳಿಗೆ ರಕ್ಷಣೆಯ ಅಗತ್ಯವಿದೆ; 12ರ ಮೇಲಿನ ಮಕ್ಕಳಿಗೆ ಶಿಸ್ತಿನ ಮತ್ತು ಮಾರ್ಗದರ್ಶನದ ಅಗತ್ಯವಿದೆ.
- 12 ವಯಸ್ಸಿನ ಕೆಳಗಿನ ಮಕ್ಕಳಿಗೆ ಆರೋಗ್ಯ ಮತ್ತು ಶಿಕ್ಷಣದ ಅಗತ್ಯವಿದೆ; 12ರ ಮೇಲಿನ ಮಕ್ಕಳಿಗೆ ನಾಗರಿಕ ಸಮಾಜದಲ್ಲಿ ವಿಧೇಯರಾಗಿರಲು ಬೇಕಾದ ವರ್ತನೆಗಳು ಮತ್ತು ಕೌಶಲ್ಯಗಳನ್ನು ಖಚಿತಪಡಿಸುವುದರ ಮೂಲಕ ಮಕ್ಕಳು 'ಒಳ್ಳೆಯ ಪ್ರಜೆ' ಗಳಾಗಲು ತರಬೇತಿ ನೀಡಬೇಕಾದ ಅಗತ್ಯವಿದೆ.

ಇವೆಲ್ಲ ಈ ಕಾರ್ಯಕ್ರಮ ನಡೆಸುವ ಅಥವಾ ಒಂದು ರೀತಿಯಲ್ಲಿ ಮಕ್ಕಳ ಜೊತೆ ಕೆಲಸ ಮಾಡುವವರ ನಂಬಿಕೆಗಳು ಅಲ್ಲದಿರಬಹುದು. ಈ ಎರಡೂ ವಯಸ್ಸಿನ ಗುಂಪಿನ ಮಕ್ಕಳ ಜೊತೆ ಈ ಎರಡೂ ರೀತಿಯ ಕೆಲಸದ ಅಗತ್ಯವಿದೆ ಎನ್ನುವುದೂ ಅಷ್ಟೇ ನಿಜ. ಇಲ್ಲಿ ಉದಹರಿಸಲು ಯತ್ನಿಸುತ್ತಿರುವುದು ಏನೆಂದರೆ, ಮಗುವಿನ ಹಕ್ಕುಗಳ ಕಾರ್ಯಕ್ರಮಗಳನ್ನು ವಸ್ತುನಿಷ್ಟವಾಗಿ ನೋಡಿದಾಗ ಅದು ಬಾಲ್ಯದ ಸಂಕುಚಿತ ಪರಿಕಲ್ಪನೆಗಳನ್ನು ಬಲಪಡಿಸುವಂತಹ ಕೆಲಸ ಮಾದರಿಗಳು ಇರುವುದನ್ನು ಮತ್ತು ಇದನ್ನು ಗಂಭೀರವಾಗಿ ಪರೀಕ್ಷಿಸುವ ಅಗತ್ಯವಿದೆ ಎನ್ನುವುದನ್ನು ಬಹಿರಂಗಪಡಿಸುತ್ತವೆ.

ಭಾರತದಲ್ಲಿನ ಶಾಸನಗಳೂ ಸಹ ಬಾಲ್ಯದ ಈ ದ್ವಂದ್ವ ತಿಳುವಳಿಕೆಯನ್ನು ಉಳಿಸಿಕೊಂಡಿದೆ. 14 ವರ್ಷದ ಕೆಳಗಿನ ಮಕ್ಕಳು ಬಾಲ ಕಾರ್ಮಿಕತೆಯಿಂದ ರಕ್ಷಿತರಾಗಿರಬೇಕು ಮತ್ತು ಶಾಲೆಯಲ್ಲಿರಲೇಬೇಕು. ಈ ಸಮಸ್ಯೆಗಳನ್ನು ಶಿಕ್ಷಣದ ಹಕ್ಕು ಕಾಯಿದೆ 2010 ಮತ್ತು ಬಾಲ ಕಾರ್ಮಿಕತೆ (ರಕ್ಷಣೆ ಮತ್ತು ನಿಯಂತ್ರಣ) ಕಾಯಿದೆ 1986, ಎರಡೂ ಉದ್ದೇಶಿಸುತ್ತವೆ. ಆದಾಗ್ಯೂ, ಈ ಕಾಯಿದೆಗಳೆರಡೂ 15 ಮತ್ತು 18 ವರ್ಷಗಳ ನಡುವಿನ ಮಕ್ಕಳ ಹಕ್ಕುಗಳನ್ನು ಉದ್ದೇಶಿಸಿ ಎನ್ನನ್ನೂ ಹೇಳುವುದಿಲ್ಲ. ಆದ್ದರಿಂದ, ಈ ವಯಸ್ಸಿನ ಮಕ್ಕಳು, ಈ ಕಾಯಿದೆಗಳಿಂದ ರಕ್ಷಣೆಯಿಲ್ಲದಿರುವ ಕಾರಣದಿಂದ ಶಿಕ್ಷಣದ ಹಕ್ಕು ಮತ್ತು ಕೆಲಸ ಮಾಡದಿರುವ ಹಕ್ಕುಗಳಿಂದ ನ್ಯಾಯಸಮ್ಮತವಾಗಿ ವಂಚಿತರಾಗುವ ಸಾಧ್ಯತೆಗಳಿದೆ.

ಈ ಮೇಲೆ ಪಟ್ಟಿ ಮಾಡಿದ ವಿಷಯಗಳ ಬಗ್ಗೆ ನಾವು ಆಲೋಚಿಸುವುದನ್ನು ಮತ್ತು ಅವುಗಳೊಡನೆ ತೊಡಗಿಸಿಕೊಳ್ಳುವುದನ್ನು ಆರಂಭಿಸುವವರೆಗೂ, ಎಲ್ಲಾ ಮಕ್ಕಳಿಗೆಂದು ತೋರಿಕೆಗೆ ಇರುವ ಕಾರ್ಯಕ್ರಮಗಳು ಮತ್ತು ಕಾಯಿದೆಗಳು ಕೇವಲ ಬಾಲ್ಯದ ಪ್ರಧಾನ ತಿಳುವಳಿಕೆಗೆ ಹೊಂದಿಕೆ ಇರುವ ಮಕ್ಕಳನ್ನು ಮಾತ್ರ ಉದ್ದೇಶಿಸುತ್ತದೆ. ಬಾಲ್ಯದ ಈ ಕಲ್ಪನೆಯನ್ನು ಸಮಸ್ಯೀಕರಣಗೊಳಿಸಿದಾಗ ಮಾತ್ರ ನಾವು ಮಕ್ಕಳು ಹೇಗಿರಬೇಕು ಎಂಬ ಸಾಮಾನ್ಯೀಕರಿಸಿದ ಕಲ್ಪನೆಯಲ್ಲದೆ, 'ನಿಜ' ವಾದ ಮಕ್ಕಳೊಡನೆ 'ನಿಜ' ವಾದ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಬಹುದು.

(ಹವ್ವೋವಿ ವಾಡಿಯಾರವರು ಮಗುವಿನ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಅನುಭವವುಳ್ಳ ಒಬ್ಬ ಅಭಿವೃದ್ಧಿ ವೃತ್ತಿಪರರು. ಆವರು ಪ್ರಸ್ತುತ ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ನಲ್ಲಿ ಪಿಹೆಚ್‌ಡಿಯ ವಿದ್ಯಾರ್ಥಿನಿಯಾಗಿದ್ದಾರೆ.)

## ಮೂಲ: ಇನ್ಫೋಚೇಂಜ್ ನ್ಯೂಸ್ ಮತ್ತು ಫೀಚರ್ಸ್, ಫೆಬ್ರುವರಿ 2011

**Endnotes**

1. F Pilotti argues that the dissemination of the CRC in the 1990s could be "characterised as the circulation of a text without a context." (Quoted in Catarina Tomas. 'Childhood and Rights: Reflections on the UN Convention on the Rights of the Child'. 2008. *Childhoods Today*. Vol 2 Issue 2. December 23, 2008. http://www.childhoodstoday.org/download.php?id=19. October 25, 2010
2. Nieuwenhuys, Olga (2009). 'Is there an Indian Childhood?' *Childhood*. Vol 16 (2). pp 147-153
3. ಏಕಕಾಲದಲ್ಲಿ ಆಕೆ ಎರಡು ವಿಷಯಗಳ ಕಡೆಗೆ ಗಮನ ಸೆಳೆಯುತ್ತಾರೆ: ಮೊದಲನೆಯದಾಗಿ, ಭಾರತದಲ್ಲಿ ಬಾಲ್ಯವನ್ನು ಆಂಶಿಕವಾಗಿ ಅಧ್ಯನ ಮಾಡುವ ವಿಧಾನದ ಬಗ್ಗೆ ಮರುಚಿಂತಿಸುವ ಅಗತ್ಯವಿದೆ. ಎರಡನೆಯದಾಗಿ, ಪ್ರಾಯಶಃ ಬಹಳ ಮುಖ್ಯವಾಗಿ, ಮಕ್ಕಳನ್ನು ಕಾಳಜಿ ತೋರಬೇಕಾಗಿರುವ ವಸ್ತುಗಳನ್ನಾಗಿ (ಆದ್ದರಿಂದ ಕಾಪಾಡುವಂಥ, ಪುನರ್ವಸತಿ ಒದಗಿಸಬೇಕಾದಂಥ, ಮತ್ತೆ ಸಮಾಜದ ಅಂಗವಾಗಿಸುವಂಥ ವಸ್ತುಗಳನ್ನಾಗಿ) ಅಥವಾ ಅಮುಖ್ಯ (ಆದ್ದರಿಂದ ಕಾಳಜಿಗೆ ಅರ್ಹರಲ್ಲದ; ನಾಗರಿತ್ವಕ್ಕೆ ಅರ್ಹರಲ್ಲದ) ವಸ್ತುಗಳನ್ನಾಗಿ ನೋಡಲಾಗುತ್ತಿದೆ.
4. ಇದಕ್ಕೆ ಕೆಲವು ಅಪವಾದಗಳಿವೆ. ಕೆಲವು ಕ್ಷೇತ್ರ ಸಂಸ್ಥೆಗಳು ಮಕ್ಕಳು ಆಟವಾಡುವ ಜಾಗಗಳನ್ನು ಸುರಕ್ಷಿತವಾಗಿಸಲು ಕೆಲಸ ಮಾಡುತ್ತಿವೆ. ಆದಾಗ್ಯೂ, ಈ ವಿಷಯದಲ್ಲಿ, ಬಾರತದಲ್ಲಿ ಬಹಳಷ್ಟು ಮಂದಿ ಆಟವನ್ನು ಬೆಳವಣಿಗೆಗೆ ಕಾರಕ ಎಂದು ನೋಡುವುದರಿಂದ ಆಟಕ್ಕಿಂತಲೂ, ಆಟದಿಂದ ಏನನ್ನು ಕಲಿಯಬಹುದು ಎನ್ನುವುದರ ಮೇಲೆಯೇ ಗಮನವಿರುತ್ತದೆ.
5. ವಸತಿ ಶಾಲಾ ಸಂಸ್ಥೆಗಳಲ್ಲಿರುವ ಮಕ್ಕಳ ದಿನಚರಿಯ ಕಡೆಗೆ ಗಮನ ಹರಿಸಿದಾಗ, ಮಕ್ಕಳು ಕಡಿಮೆಯೆಂದರೂ ಆರು ಗಂಟೆಗಳ ಕಾಲ ಶಾಲೆಯಲ್ಲಿ, ಸಾಮಾನ್ಯವಾಗಿ ಎರಡರಿಂದ ಆರು ಗಂಟೆಗಳ ಕಾಲ ಶಾಲೆಯ ನಂತರ ಓದಲು ಕಳೆಯುತ್ತಾರೆ, ಮತ್ತು ಸುಮಾರು ಒಂದು ಅಥವಾ ಎರಡು ಗಂಟೆಗಳ ಕಾಲ ಆಟಕ್ಕಾಗಿ ಮೀಸಲಿಡುತ್ತಾರೆ ಎನ್ನುವುದು ಶಿಕ್ಷಣಕ್ಕೆ ನೀಡುವ ಆದ್ಯತೆಯನ್ನು ನಮಗೆ ಸ್ಪಷ್ಟವಾಗಿ ತಿಳಿಸುತ್ತದೆ.
6. Bajpai, Asha (2007). 'Child Rights in India'. *Infochange Agenda*. June 2007.http://infochangeindia.org/200706186472/(referred to on October 25, 2010)
7. Dutta, D and Sircar, O. 'Foot Soldiers for our Mothers'. *Infochange Agenda.* November 9, 2010.http://infochangeindia.org/200706116580/Agenda/C
8. Mankekar, Purnima (1997). 'To Whom does Ameena Belong? Towards a Feminist Analysis of Childhood and Nationhood in Contemporary India'. *Feminist Review*.No 56. 'Debating Discourses, Practising Feminisms'. pp 26-60
9. *Childhood.* 2010. 17: 291